# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 187 | Pages. 2 | Date: 04-07-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 187 – ಪುಟಗಳು : 2 | 04-07-2026 ಶನಿವಾರ | Ph: 8762954248 | ದರ : ₹1


# ಫುಟ್ ಪಾತ್ ತೆರವು: ದಿನವಿಡೀ ಸದ್ದು

## ತೆರವು ಕಾರ್ಯಾಚರಣೆ-ಜೆಸಿಬಿಗೆ ಅಡ್ಡ ನಿಂತ ಮಹಿಳೆಯರು: ವಾಗ್ವಾದ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದಲ್ಲಿ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯಾಗುತ್ತಿರುವ ಅನಧಿಕೃತ ರಸ್ತೆ ಬದಿ ಗೂಡಂಗಡಿ, ತಳ್ಳುವಗಾಡಿ ಹಾಗೂ ಬೀದಿ ಬದಿ ವ್ಯಾಪಾರಗಳ ವಿರುದ್ಧ ಹಾಸನ ಮಹಾನಗರ ಪಾಲಿಕೆ ಕೈಗೊಂಡಿರುವ ವಿಶೇಷ ತೆರವು ಕಾರ್ಯಾಚರಣೆ ಎರಡನೇ ದಿನವೂ ಮುಂದುವರಿಯಿತು. ನಗರದ ಪ್ರಮುಖ ರಸ್ತೆಗಳಲ್ಲಿ ಅತಿಕ್ರಮಣ ತೆರವುಗೊಳಿಸುವ ಮೂಲಕ ಸಾರ್ವಜನಿಕರಿಗೆ ಸುಗಮ ಸಂಚಾರ ಕಲ್ಪಿಸುವ ಉದ್ದೇಶದಿಂದ ಪಾಲಿಕೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಂಡರು.

ಶುಕ್ರವಾರ ಬೆಳಿಗ್ಗೆ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಎವಿಕೆ ಕಾಲೇಜು ರಸ್ತೆ ಮತ್ತು ಎಂ.ಜಿ. ರಸ್ತೆಯಲ್ಲಿ ಕಾರ್ಯಾಚರಣೆ ನಡೆಸಿ, ರಸ್ತೆ ಬದಿ ಅನಧಿಕೃತವಾಗಿ ವ್ಯಾಪಾರ ನಡೆಸುತ್ತಿದ್ದ ಗೂಡಂಗಡಿಗಳು, ತಳ್ಳುವಗಾಡಿಗಳು ಹಾಗೂ ಇತರೆ ತಾತ್ಕಾಲಿಕ ವ್ಯಾಪಾರ ಮಳಿಗೆಗಳನ್ನು ತೆರವುಗೊಳಿಸಿದರು. ಕಾರ್ಯಾಚರಣೆ ವೇಳೆ ಹಲವು ವ್ಯಾಪಾರಿಗಳಿಗೆ ಮತ್ತೊಮ್ಮೆ ಎಚ್ಚರಿಕೆ ನೀಡಲಾಯಿತು.

ಈ ವೇಳೆ ಮಾತನಾಡಿದ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ, ಕಳೆದ ಒಂದು ವಾರದಿಂದಲೇ ಬೀದಿ ಬದಿ ವ್ಯಾಪಾರಿಗಳಿಗೆ ಹಲವು ಬಾರಿ ಮೌಖಿಕವಾಗಿ ಹಾಗೂ ಸ್ಥಳದಲ್ಲೇ ಭೇಟಿ ನೀಡಿ ಮುಖ್ಯ ರಸ್ತೆಗಳಲ್ಲಿ ವ್ಯಾಪಾರ ನಡೆಸದಂತೆ ಸೂಚಿಸಲಾಗಿತ್ತು. ಗುರುವಾರ ಮೊದಲ ಹಂತದ ಕಾರ್ಯಾಚರಣೆ ನಡೆಸಿ ಎಚ್ಚರಿಕೆ ನೀಡಿದ್ದರೂ, ಕೆಲವರು ಮತ್ತೆ ಅದೇ ಸ್ಥಳಗಳಲ್ಲಿ ವ್ಯಾಪಾರ ಆರಂಭಿಸಿದ್ದರಿಂದ ಶುಕ್ರವಾರವೂ ತೆರವು ಕಾರ್ಯಾಚರಣೆ ಮುಂದುವರಿಸಲಾಗಿದೆ. ನಗರದ ಪ್ರಮುಖ ರಸ್ತೆಗಳು ಸಾರ್ವಜನಿಕರ



ಸುಗಮ ಸಂಚಾರಕ್ಕಾಗಿ ಮೀಸಲಾಗಿದ್ದು, ಪಾದಚಾರಿಗಳು ಹಾಗೂ ವಾಹನ ಸಂಚಾರಕ್ಕೆ ಯಾವುದೇ ಅಡ್ಡಿ ಉಂಟಾಗದಂತೆ ನೋಡಿಕೊಳ್ಳುವುದು ಮಹಾ ನಗರ ಪಾಲಿಕೆಯ ಜವಾಬ್ದಾರಿಯಾಗಿದೆ. ಆದ್ದರಿಂದ ರಸ್ತೆ, ಪಾದಚಾರಿ ಮಾರ್ಗ ಹಾಗೂ ಜಂಕ್ಷನ್‌ಗಳ ಬಳಿ ಯಾವುದೇ ರೀತಿಯ ಗೂಡಂಗಡಿ ಅಥವಾ ತಳ್ಳುವಗಾಡಿ ಇಟ್ಟು ವ್ಯಾಪಾರ ನಡೆಸಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು. ಇದೇ ವೇಳೆ, ಶನಿವಾರ ಡೈರಿ ವೃತ್ತ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿಶೇಷ ತೆರವು ಕಾರ್ಯಾಚರಣೆ ನಡೆಸಲಾಗುವುದು ಎಂದು ಅಧಿಕಾರಿಗಳು ಘೋಷಿಸಿದರು.

ಅಲ್ಲಿನ ಗೂಡಂಗಡಿ ಹಾಗೂ ತಳ್ಳುಗಾಡಿ ವ್ಯಾಪಾರಿಗಳು ಸ್ವಯಂ ಪ್ರೇರಿತವಾಗಿ ತಮ್ಮ ವ್ಯಾಪಾರ ಮಳಿಗೆಗಳನ್ನು ತೆರವುಗೊಳಿಸಿಕೊಳ್ಳಬೇಕು. ಇಲ್ಲವಾದರೆ ಪಾಲಿಕೆಯ ತಂಡ ಸ್ಥಳಕ್ಕೆ ತೆರಳಿ ಯಾವುದೇ ಪೂರ್ವ ಸೂಚನೆ ಇಲ್ಲದೆ ತೆರವು ಕಾರ್ಯಾಚರಣೆ ನಡೆಸಲಿದೆ ಎಂದು ಎಚ್ಚರಿಕೆ ನೀಡಿದರು.

ನಗರದ ಪ್ರಮುಖ ರಸ್ತೆಗಳು, ವೃತ್ತಗಳು ಹಾಗೂ ಜನಸಂದಣಿ ಹೆಚ್ಚಿರುವ ಪ್ರದೇಶಗಳಲ್ಲಿ ಯಾವುದೇ ರೀತಿಯ ಬೀದಿಬದಿ ವ್ಯಾಪಾರಕ್ಕೆ ಅವಕಾಶ ನೀಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ರಸ್ತೆ ಬದಿಯ ಅತಿಕ್ರಮಣದಿಂದ ವಾಹನ ದಟ್ಟಣೆ ಹೆಚ್ಚುವುದು, ಪಾದಚಾರಿಗಳಿಗೆ ತೊಂದರೆಯಾಗುವುದು ಹಾಗೂ ಅಪಘಾತಗಳ ಸಂಭವ ಹೆಚ್ಚುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರ ಸುರಕ್ಷತೆ ಮತ್ತು ನಗರ ಸಂಚಾರ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶದಿಂದ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಸಾರ್ವಜನಿಕರು ಹಾಗೂ ಬೀದಿಬದಿ ವ್ಯಾಪಾರಿಗಳು ಪಾಲಿಕೆಯೊಂದಿಗೆ ಸಹಕರಿಸಿ, ನಿಗದಿತ ಸ್ಥಳಗಳಲ್ಲಿ ಮಾತ್ರ ವ್ಯಾಪಾರ ನಡೆಸುವಂತೆ ಅಧಿಕಾರಿಗಳು ಮನವಿ ಮಾಡಿದರು.

ನಗರದ ಪ್ರಮುಖ ರಸ್ತೆಗಳನ್ನು ಅತಿಕ್ರಮಣ ಮುಕ್ತಗೊಳಿಸುವ ವಿಶೇಷ ಅಭಿಯಾನ ಮುಂದುವರಿಯಲಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

> ಸಾರ್ವಜನಿಕ ರಸ್ತೆಗಳ ಮೇಲೆ ಅನಧಿಕೃತವಾಗಿ ಅತಿಕ್ರಮಣ ಮಾಡಿಕೊಂಡು ವ್ಯಾಪಾರ ನಡೆಸುವವರಿಗೆ ಪ್ರತ್ಯೇಕ ನೋಟಿಸ್ ನೀಡುವ ಅಗತ್ಯವಿಲ್ಲ. ಸಾರ್ವಜನಿಕ ರಸ್ತೆ ಯಾರೊಬ್ಬರ ಖಾಸಗಿ ಆಸ್ತಿಯಲ್ಲ, ಅದು ಸಾರ್ವಜನಿಕ ಬಳಕೆಗಾಗಿ ಇರುವ ಸ್ಥಳವಾಗಿದ್ದು, ಅಲ್ಲಿ ವ್ಯಾಪಾರ ನಡೆಸಲು ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಪಾಲಿಕೆ ನೇರವಾಗಿ ತೆರವು ಕಾರ್ಯಾಚರಣೆ ಕೈಗೊಳ್ಳಬಹುದು. ಕೆಲವು ಒಳ ರಸ್ತೆಗಳಲ್ಲಿ ನಿಯಮಾನುಸಾರ ಶುಲ್ಕ ಪಾವತಿಸಿ ವ್ಯಾಪಾರ ನಡೆಸಲು ಅವಕಾಶವಿದ್ದರೂ, ಅದು ಮುಖ್ಯ ರಸ್ತೆಗಳಿಗೆ ಅನ್ವಯಿಸುವುದಿಲ್ಲ.
>
> **– ಕೃಷ್ಣಮೂರ್ತಿ, ಆಯುಕ್ತರು, ಹಾಸನ ಮಹಾನಗರ ಪಾಲಿಕೆ**

## ತೆರವು ಕಾರ್ಯಾಚರಣೆ: ವಾಗ್ವಾದ-ಪ್ರತಿಭಟನೆ

ಹಾಸನ: ನಗರದ ರೈಲ್ವೆ ನಿಲ್ದಾಣ ಸಮೀಪದ ಬಿ.ಎಂ. ರಸ್ತೆಯ ಪಾದಚಾರಿ ಮಾರ್ಗದಲ್ಲಿ ಅಕ್ರಮವಾಗಿ ಹಾಕಿದ್ದ ಗೂಡಂಗಡಿ ತೆರವು ಕಾರ್ಯಾಚರಣೆ ಶುಕ್ರವಾರವೂ ಮುಂದುವರಿದಿದ್ದರಿಂದ ಇದಕ್ಕೆ ವರ್ತಕರು ಹಾಗೂ ವಿವಿಧ ಘಟನೆಗಳವರು ವಿರೋಧ ವ್ಯಕ್ತಪಡಿಸಿದ್ದರಿಂದ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಜೆಸಿಬಿ ಮೂಲಕ ತೆರವಿಗೆ ಮುಂದಾದ ಮಹಾನಗರ ಪಾಲಿಕೆ ಅಧಿಕಾರಿಗಳು ಮತ್ತು ಬೀದಿ ಬದಿ ವ್ಯಾಪಾರಿಗಳ ನಡುವೆ ವಾಗ್ವಾದ ನಡೆಯಿತು. ಈ ಸಂದರ್ಭದಲ್ಲಿ ಎಸ್‌ಎಫ್‌ಐ, ಡಿವೈಎಫ್‌ಐ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ವ್ಯಾಪಾರಿಗಳ ಪರವಾಗಿ ಧರಣಿ ನಡೆಸಿ ಘೋಷಣೆ ಕೂಗಿದರು.

ಕೆಲ ದಿನಗಳ ಹಿಂದೆ ಪಾಲಿಕೆ ಅಧಿಕಾರಿಗಳು ಗೂಡಂಗಡಿಗಳನ್ನು ಸ್ವಯಂಪ್ರೇರಿತವಾಗಿ ತೆರವುಗೊಳಿಸದಿದ್ದರೆ ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದರು. ಅದರಂತೆ ಶುಕ್ರವಾರ ಕಾರ್ಯಾಚರಣೆ ಆರಂಭಿಸಿದಾಗ ವ್ಯಾಪಾರಿಗಳು ವಿರೋಧ ವ್ಯಕ್ತಪಡಿಸಿದರು. ಪ್ರತಿಭಟನೆ ಹಿನ್ನೆಲೆಯಲ್ಲಿ ಕೆಲಕಾಲ ಜೆಸಿಬಿ ಕಾರ್ಯಾಚರಣೆ ಸ್ಥಗಿತಗೊಂಡಿದ್ದು, ಬಳಿಕ ಅಧಿಕಾರಿಗಳು ಪರಿಸ್ಥಿತಿ ನಿಯಂತ್ರಿಸಲು ಮುಂದಾದರು.

ಬೀದಿ ಬದಿ ವ್ಯಾಪಾರಿ ರಾಧಾ ಮಾತನಾಡಿ, ಕಳೆದ 15 ವರ್ಷಗಳಿಂದ ಇದೇ ಸ್ಥಳದಲ್ಲಿ ಸಣ್ಣ ವ್ಯಾಪಾರ ನಡೆಸಿ ಕುಟುಂಬ ನಿರ್ವಹಿಸುತ್ತಿದ್ದೇವೆ. ವ್ಯಾಪಾರಕ್ಕಾಗಿ ಬಂಡವಾಳ ಹೂಡಿರುವ ವಸ್ತುಗಳನ್ನು ಪಾಲಿಕೆ ಸಿಬ್ಬಂದಿ ತೆಗೆದುಕೊಂಡು ಹೋಗಿದ್ದಾರೆ. ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಮನೆ ಬಾಡಿಗೆ, ಮಕ್ಕಳ ಶಿಕ್ಷಣ ಸೇರಿದಂತೆ ಕುಟುಂಬದ ಹೊಣೆಗಾರಿಕೆಗಳಿವೆ. ಈಗ ಏಕಾಏಕಿ ತೆರವುಗೊಳಿಸಿದರೆ ಜೀವನ ಸಾಗಿಸುವುದು ಹೇಗೆ ಎಂದು ಪ್ರಶ್ನಿಸಿದರು. ಪರ್ಯಾಯವಾಗಿ ವ್ಯಾಪಾರ ಮಾಡಲು ಸೂಕ್ತ ಸ್ಥಳವನ್ನು ಪಾಲಿಕೆ ಒದಗಿಸಬೇಕು. ಚುನಾವಣೆ ವೇಳೆ ಮತ ಕೇಳಲು ಬರುವ ಜನಪ್ರತಿನಿಧಿಗಳು ಸಂಕಷ್ಟದ ಸಮಯದಲ್ಲಿ ನಮ್ಮ ನೆರವಿಗೆ ಬರಬೇಕು ಎಂದು ಮನವಿ ಮಾಡಿದರು.

ಇನ್ನೊರ್ವ ವ್ಯಾಪಾರಿ ಮಮತಾ ಮಾತನಾಡಿ, ಹಲವು ವರ್ಷಗಳಿಂದ ಇದೇ ಸ್ಥಳದಲ್ಲಿ ವ್ಯಾಪಾರ ನಡೆಸುತ್ತಿದ್ದು, ಸಾಲ ಪಡೆದು ವ್ಯಾಪಾರ ಆರಂಭಿಸಿದ್ದೇವೆ. ಇದೇ ಆದಾಯದಿಂದ ಸಾಲ ಮರುಪಾವತಿ ಮಾಡಬೇಕಿದೆ.

ವ್ಯಾಪಾರ ನಡೆಯುವ ಸೂಕ್ತ ಸ್ಥಳದಲ್ಲಿ ಜಾಗ ನೀಡಿದರೆ



ಅಲ್ಲಿಯೇ ನಿಯಮಾನುಸಾರ ವ್ಯಾಪಾರ ನಡೆಸುತ್ತೇವೆ ಎಂದರು. ನಾವು ಪ್ರಾಮಾಣಿಕವಾಗಿ ದುಡಿದು ಜೀವನ ಸಾಗಿಸುತ್ತಿದ್ದೇವೆ. ದುಡಿದು ಬದುಕುವ ಅವಕಾಶ ಕಸಿದುಕೊಳ್ಳುವುದು ಸರಿಯಲ್ಲ. ಸರ್ಕಾರ ಹಾಗೂ ಸ್ಥಳೀಯ ಆಡಳಿತ ನಮ್ಮ ಬದುಕಿನ ಪ್ರಶ್ನೆಗೆ ಸ್ಪಂದಿಸಬೇಕು ಎಂದು ಆಗ್ರಹಿಸಿದರು.

ಪಾದಚಾರಿ ಮಾರ್ಗದಲ್ಲಿ ಅಂಗಡಿಗಳಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ವ್ಯಾಪಾರಿಗಳು, ಸಾರ್ವಜನಿಕರಿಂದ ಯಾವುದೇ ದೂರು ಬಂದಿಲ್ಲ. ನಾವು ದುಡಿದು ಜೀವನ ಸಾಗಿಸುತ್ತಿದ್ದೇವೆ. ಕಳ್ಳತನ ಅಥವಾ ಅಕ್ರಮ ಚಟುವಟಿಕೆಗಳಲ್ಲಿ ತೊಡಗದೆ, ಪ್ರಾಮಾಣಿಕವಾಗಿ ವ್ಯಾಪಾರ ಮಾಡುತ್ತಿದ್ದೇವೆ. ನಮ್ಮ ಬದುಕನ್ನು ಉಳಿಸಿಕೊಳ್ಳಲು ನ್ಯಾಯಯುತ ಪರಿಹಾರ ಹಾಗೂ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ವಿವಿಧ ಘಟನೆಗಳ ಮುಖಂಡರು ಹಾಜರಿದ್ದರು, ಬಡವರ ಜೀವನೋಪಾಯಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

## ಶಿಕ್ಷಣದ-ಸಂಸ್ಕಾರ ಕಲಿಸಲು ಸ್ವಾಮೀಜಿ ಕರೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಕ್ಕಳ ವ್ಯಕ್ತಿತ್ವ ನಿರ್ಮಾಣದ ಅಡಿಪಾಯ ಬಾಲ್ಯದಲ್ಲಿಯೇ ಹಾಕಲಾಗುತ್ತದೆ. ಆದ್ದರಿಂದ ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನೂ ನೀಡಬೇಕು ಎಂದು ಶ್ರೀ ಆದಿಚುಂಚನಗಿರಿ ಹಾಸನ ಶಾಖಾ ಮಠದ ಪರಮಪೂಜ್ಯ ಶ್ರೀ ಶಂಭುನಾಥ ಸ್ವಾಮೀಜಿ ಕರೆ ನೀಡಿದರು.

ನಗರದ ಬಿಜಿಎಸ್ ಶಾಲೆಯಲ್ಲಿ 2026-27ನೇ ಶೈಕ್ಷಣಿಕ ವರ್ಷದ ಪುಟಾಣಿ ಮಕ್ಕಳಿಗಾಗಿ ಆಯೋಜಿಸಿದ್ದ ವಿದ್ಯಾರಂಭ ಅಕ್ಷರಭ್ಯಾಸ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು,

ಮನೆಯೇ ಮೊದಲ ಪಾಠಶಾಲೆ ಹಾಗೂ ತಾಯಿಯೇ ಮೊದಲ ಗುರು ಎಂಬ ಮಾತಿನ ಮಹತ್ವವನ್ನು ಪೋಷಕರು ಅರಿತು ನಡೆದುಕೊಳ್ಳಬೇಕು.

ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ ಎಂಬ ಗಾದೆಯನ್ನು ಉಲ್ಲೇಖಿಸಿದ ಸ್ವಾಮೀಜಿಯವರು, ಬಾಲ್ಯದಲ್ಲಿಯೇ ಮಕ್ಕಳನ್ನು ಶಿಸ್ತು, ಸನ್ನಡತೆ, ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳೊಂದಿಗೆ ಬೆಳೆಸಿದರೆ ಅವರು ಮುಂದಿನ ದಿನಗಳಲ್ಲಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ ಎಂದರು.

ಪ್ರತಿಯೊಬ್ಬ ಮಹಿಳೆ ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜೊತೆಗೆ ಮಕ್ಕಳಿಗೆ ಸಂಸ್ಕಾರದ ಬೀಜ ಬಿತ್ತುವ ಮೊದಲ ಗುರುವಾಗಬೇಕು. ಮಕ್ಕಳಲ್ಲಿ ಸತ್ಯ, ಪ್ರಾಮಾಣಿಕತೆ, ಹಿರಿಯರ ಬಗ್ಗೆ ಗೌರವ, ಕರುಣೆ ಹಾಗೂ ಸಾಮಾಜಿಕ ಹೊಣೆಗಾರಿಕೆಯಂತಹ ಮೌಲ್ಯಗಳನ್ನು ಬಾಲ್ಯದಿಂದಲೇ ಬೆಳೆಸುವುದು ಪೋಷಕರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ ಎಂಬ ಭಾರತೀಯ ಸಂಸ್ಕೃತಿಯ ಶಾಶ್ವತ ಮೌಲ್ಯಗಳನ್ನು ಮಕ್ಕಳ ಜೀವನದಲ್ಲಿ ಅಳವಡಿಸಬೇಕು. ತಾಯಿ, ತಂದೆ ಮತ್ತು ಗುರುಗಳನ್ನು ದೇವರ ಸಮಾನವಾಗಿ ಗೌರವಿಸುವ ಸಂಸ್ಕಾರ ಮಕ್ಕಳ ವ್ಯಕ್ತಿತ್ವವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ ಎಂದು ಹೇಳಿದರು.

ದಾನಗಳಲ್ಲಿ ವಿದ್ಯಾದಾನವೇ ಶ್ರೇಷ್ಠ. ಹೊಲಕ್ಕೆ ಬಿತ್ತಿದ ಬೆಳೆ ಹೇಗೆ ಫಲ ನೀಡುತ್ತದೆಯೋ, ತಲೆಗೆ ಅಚ್ಚಿದ ಅಕ್ಷರ ಜೀವನಪೂರ್ತಿ ಮನುಷ್ಯನಿಗೆ ದಾರಿದೀಪವಾಗಿರುತ್ತದೆ. ಆದ್ದರಿಂದ ಮಕ್ಕಳಿಗೆ ನೀಡುವ ಶಿಕ್ಷಣ ಮತ್ತು ಸಂಸ್ಕಾರವೇ ಅವರ ಭವಿಷ್ಯದ ಅಮೂಲ್ಯ ಸಂಪತ್ತಾಗಿದೆ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

ನಂತರ ಪುಟಾಣಿ ಮಕ್ಕಳಿಗೆ ಸ್ವತಃ ಕೈಹಿಡಿದು ಅಕ್ಷರಾಭ್ಯಾಸ ಮಾಡಿಸಿ, ಸರಸ್ವತಿ ದೇವಿಯ ಕೃಪೆಯಿಂದ ಮಕ್ಕಳು ಜ್ಞಾನವಂತರಾಗಿ, ಸಂಸ್ಕಾರವಂತರಾಗಿ, ಸಮಾಜಕ್ಕೆ ಮಾದರಿಯಾಗುವ ವ್ಯಕ್ತಿಗಳಾಗಿ ಬೆಳೆಯಲಿ ಎಂದು ಆಶೀರ್ವದಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ, ಸಿಬ್ಬಂದಿ ಹಾಗೂ ನೂರಾರು ಪೋಷಕರು ತಮ್ಮ ಮಕ್ಕಳೊಂದಿಗೆ ಪಾಲ್ಗೊಂಡಿದ್ದರು. ವಿದ್ಯಾರಂಭದ ಈ ಅಕ್ಷರಾಭ್ಯಾಸ ಕಾರ್ಯಕ್ರಮ ಮಕ್ಕಳ ಶೈಕ್ಷಣಿಕ ಜೀವನಕ್ಕೆ ಶುಭಾರಂಭ ಆಗುವುದರ ಜೊತೆಗೆ, ಸಂಸ್ಕಾರಯುತ ಶಿಕ್ಷಣದ ಮಹತ್ವವನ್ನು ಪೋಷಕರಿಗೆ ಮನವರಿಕೆ ಮಾಡುವಲ್ಲಿ ಯಶಸ್ವಿಯಾಯಿತು.

## ಭೂಕಬಳಿಕೆ ಸಂಚು: ಬೆಟ್ಟಸೋಗೆ ಗ್ರಾಮದಲ್ಲಿ ಅಮಾನವೀಯ ಕೃತ್ಯ

## ಜೆಸಿಬಿಯಿಂದ 3 ಮನೆಗಳ ಧ್ವಂಸ: ಸ್ಥಳಕ್ಕೆ ತಹಸೀಲ್ದಾರ್ ಭೇಟಿ



> “ಮನೆಯವರು ಇಲ್ಲದ ವೇಳೆ ಜೆಸಿಬಿ ಬಳಸಿ ಏಕಾಏಕಿ ಮನೆಗಳನ್ನು ನೆಲಸಮಗೊಳಿಸಿರುವುದು ಅತ್ಯಂತ ಅಮಾನವೀಯ ಹಾಗೂ ಕ್ರಿಮಿನಲ್ ಕೃತ್ಯವಾಗಿದೆ. ಸುರಿಯುವ ಮಳೆಯಲ್ಲಿ ಕುಟುಂಬಗಳು ಬೀದಿಗೆ ಬಿದ್ದಿರುವುದು ನೋವಿನ ಸಂಗತಿ. ಘಟನೆಯ ಬಗ್ಗೆ ಸಂಪೂರ್ಣ ವರದಿ ಪಡೆದುಕೊಳ್ಳಲಾಗುತ್ತಿದ್ದು, ಕಾನೂನು ಪ್ರಕಾರ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಂತ್ರಸ್ತರಿಗೆ ನ್ಯಾಯ ಒದಗಿಸಲು ತಾಲೂಕು ಆಡಳಿತ ಬದ್ಧವಾಗಿದೆ.”
>
> **– ಕೆ.ಸಿ. ಸೌಮ್ಯ, ತಹಸೀಲ್ದಾರ್, ಅರಕಲಗೂಡು ತಾಲೂಕು.**


**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು : ತಾಲೂಕಿನ ಬೆಟ್ಟಸೋಗೆ ಗ್ರಾಮದಲ್ಲಿ ಜಾಗ ಕಬಳಿಸುವ ಉದ್ದೇಶದಿಂದ ಮೂರು ಕುಟುಂಬಗಳಿಗೆ ಸೇರಿದ ಮೂರು ವಾಸದ ಮನೆಗಳನ್ನು ಜೆಸಿಬಿ ಯಂತ್ರದ ಮೂಲಕ ಏಕಾಏಕಿ ಧ್ವಂಸಗೊಳಿಸಿರುವ ಘಟನಾ ಸ್ಥಳಕ್ಕೆ ತಹಸೀಲ್ದಾರ್ ಕೆ.ಸಿ. ಸೌಮ್ಯ ಅವರು ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸುರಿಯುತ್ತಿದ್ದ ಮಳೆಯಲ್ಲೇ ಕೊಡೆ ಹಿಡಿದು ಸ್ಥಳ ಪರಿಶೀಲನೆ ನಡೆಸಿದ ಅವರು, ಘಟನೆಯನ್ನು ತೀವ್ರವಾಗಿ ಖಂಡಿಸಿ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಗ್ರಾಮದ ಮಲ್ಲೇಗೌಡ, ಕಾಳೇಗೌಡ ಹಾಗೂ ಸುಬ್ಬೇಗೌಡ ಅವರಿಗೆ ಸೇರಿದ ವಾಸದ ಮನೆಗಳನ್ನು, ಪಕ್ಕದ ಮನೆಯ ರಂಗೇಗೌಡ ಎಂಬಾತ ಭೂಮಿ ಕಬಳಿಸುವ ಸಂಚು ಹೂಡಿ ಜೆಸಿಬಿ ತಂದು ನೆಲಸಮಗೊಳಿಸಿ ಅಟ್ಟಹಾಸ ಮೆರೆದಿದ್ದಾನೆ. ಮನೆಯವರು ಇಲ್ಲದ ಸಮಯವನ್ನು ದುರುಪಯೋಗಪಡಿಸಿಕೊಂಡು ಈ ಕ್ರಿಮಿನಲ್ ಕೃತ್ಯ ಎಸಗಲಾಗಿದೆ. ಪರಿಣಾಮ, ಮನೆಗಳೊಳಗಿದ್ದ ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು, ದಿನಸಿ ಸಾಮಗ್ರಿಗಳು, ಹೆಂಚು-ಕವಕೋಲು ಸೇರಿದಂತೆ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಮಣ್ಣುಪಾಲಾಗಿವೆ. ಮನೆಗಳು ಧ್ವಂಸಗೊಂಡ ಹಿನ್ನೆಲೆಯಲ್ಲಿ ಸಂತ್ರಸ್ತ ಕುಟುಂಬಗಳು ರಾತ್ರಿಯಿಡೀ ಮಳೆಯಲ್ಲಿ ನೆನೆದು ಬೀದಿಗೆ ಬಿದ್ದ ದುಸ್ಥಿತಿ ಎದುರಾಗಿದೆ.

### ಘಟನೆಯ ಸಮಗ್ರ ನೋಟ

ಅರಕಲಗೂಡು ತಾಲೂಕಿನ ಬೆಟ್ಟಸೋಗೆ ಗ್ರಾಮದಲ್ಲಿ ಜಾಗದ ವ್ಯಾಜ್ಯ ಹಾಗೂ ಕಬಳಿಕೆಯ ಉದ್ದೇಶದಿಂದ ಪಕ್ಕದ ಮನೆಯ ರಂಗೇಗೌಡ ಎಂಬಾತ ಜೆಸಿಬಿ ಬಳಸಿ ಮೂರು ಮನೆಗಳನ್ನು ಧ್ವಂಸಗೊಳಿಸಿದ್ದಾನೆ. ಮಲ್ಲೇಗೌಡ, ಕಾಳೇಗೌಡ ಮತ್ತು ಸುಬ್ಬೇಗೌಡ ಎಂಬುವವರಿಗೆ ಸೇರಿದ ಮನೆಗಳು ಸಂಪೂರ್ಣ ನೆಲಸಮವಾಗಿದ್ದು, ಮನೆಯಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ದವಸ-ಧಾನ್ಯ, ಗೃಹೋಪಯೋಗಿ ವಸ್ತುಗಳು ಮಣ್ಣುಪಾಲಾಗಿವೆ. ಏಕಾಏಕಿ ನಡೆದ ಈ ದುಷ್ಕೃತ್ಯದಿಂದಾಗಿ ಬಡ ಕುಟುಂಬಗಳು ಸುರಿಯುವ ಮಳೆಯಲ್ಲೇ ಬೀದಿಪಾಲಾಗಿವೆ. ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಪೊಲೀಸ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳ ಮಹಜರು ನಡೆಸಿದ್ದು, ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಕಠಿಣ ಕಾನೂನು ಕ್ರಮಕ್ಕೆ ಮುಂದಾಗಿದ್ದಾರೆ.



ಘಟನೆಗೆ ಸಂಬಂಧಿಸಿದಂತೆ ಸಂತ್ರಸ್ತರು ಕೊಣನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಗುರುವಾರವೇ ಸ್ಥಳಕ್ಕೆ ಭೇಟಿ ನೀಡಿದ್ದ ಕೊಣನೂರು ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಮರಿಯಪ್ಪ ಬ್ಯಾಳಿ ಅವರು ಸ್ಥಳ ಮಹಜರು ನಡೆಸಿದ್ದರು. ಇದೀಗ ತಹಸೀಲ್ದಾರ್ ಕೆ.ಸಿ. ಸೌಮ್ಯ ಅವರು ಸಂತ್ರಸ್ತ ಕುಟುಂಬಗಳೊಂದಿಗೆ ಮಾತನಾಡಿ, ಘಟನೆ ಕುರಿತು ಸಮಗ್ರ ಮಾಹಿತಿ ಕಲೆಹಾಕಿದರು. ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಆರೋಪಿಯ ವಿರುದ್ಧ ಕಠಿಣ ಕ್ರಮ ಕೈಗೊಂಡು ಸಂತ್ರಸ್ತರಿಗೆ ತಕ್ಷಣ ಪರಿಹಾರ ಒದಗಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಜು.5 ರಂದು ರನ್ ಫಾರ್ ಹೆಲ್ತ್ ಮ್ಯಾರಥಾನ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇತ್ತೀಚಿನ ದಿನಗಳಲ್ಲಿ ಯುವಜನರಲ್ಲಿ ಹೆಚ್ಚುತ್ತಿರುವ ಹೃದಯಾಘಾತ, ಪರಿಸರ ಜಾಗೃತಿ ಜೀವನಶೈಲಿ ಸಂಬಂಧಿತ ಕಾಯಿಲೆಗಳು ಹಾಗೂ ದೈಹಿಕ ಚಟುವಟಿಕೆಯ ಕೊರತೆ ಬಗ್ಗೆ ಹಾಗೂ ಇತರೆ ದುಶ್ಚಟಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ನಗರದ ವಿದ್ಯಾನಗರದ ಕುವೆಂಪು ಯುವಕರ ಸಂಘದ ವತಿಯಿಂದ ಜು.5 ರಂದು ಫಿಟ್ ಹಾಸನ್ ಮ್ಯಾರಥಾನ್ ನಮ್ಮ ನಡೆ...ಆರೋಗ್ಯದ ಕಡೆ ಎಂಬ ವಿಶೇಷ ಆರೋಗ್ಯ ಜಾಗೃತಿ ಮ್ಯಾರಥಾನ್ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಐ.ಜಿ.ಗಿರೀಶ್ ಕುಮಾರ್, ರಂಗೇಗೌಡ ಹಾಗೂ ಸಮಾಜ ಸೇವಕ ಕಂಚಮಾರನಹಳ್ಳಿ ಕಾಂತರಾಜು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ನಗರದ ಎಂ.ಜಿ. ರಸ್ತೆಯಲ್ಲಿ ಭಾನುವಾರ ಬೆಳಿಗ್ಗೆ 6.30ಕ್ಕೆ ಮ್ಯಾರಥಾನ್‌ಗೆ ಚಾಲನೆ ದೊರೆಯಲಿದ್ದು, ಪುರುಷರಿಗೆ 5 ಕಿ.ಮೀ. ಹಾಗೂ ಮಹಿಳೆಯರಿಗೆ 3 ಕಿ.ಮೀ. ವಿಭಾಗಗಳಲ್ಲಿ ಓಟ ನಡೆಯಲಿದೆ. ಸ್ಪರ್ಧೆಯಲ್ಲಿ ವಿಜೇತರಾಗುವವರಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಭಾಗವಹಿಸುವವರಿಗೆ ನೋಂದಣಿ ಶುಲ್ಕವನ್ನು 99 ನಿಗದಿಪಡಿಸಲಾಗಿದ್ದು, ಭಾಗವಹಿಸುವವರಿಗೆ ಟೀ. ಶರ್ಟ್, ಹ್ಯೂಸ್, ತಿಂಡಿ ನೀಡಲಾಗುವುದು ಎಂದರು. ಕೇವಲ ಸ್ಪರ್ಧೆಯ ಉದ್ದೇಶದಿಂದಲ್ಲ,



ಆರೋಗ್ಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಾಮಾಜಿಕ ಅಭಿಯಾನವಾಗಿ ಈ ಕಾರ್ಯಕ್ರಮ ರೂಪಿಸಲಾಗಿದೆ.

ಪ್ರತಿದಿನ ಕನಿಷ್ಠ ಸ್ವಲ್ಪ ಸಮಯವಾದರೂ ವ್ಯಾಯಾಮ, ವಾಕಿಂಗ್ ಅಥವಾ ಓಟದಂತಹ ದೈಹಿಕ ಚಟುವಟಿಕೆಗಳನ್ನು ರೂಡಿಸಿಕೊಳ್ಳುವ ಮೂಲಕ ಹೃದಯ ಸಂಬಂಧಿ ಕಾಯಿಲೆಗಳು ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟಬಹುದು ಎಂಬ ಸಂದೇಶವನ್ನು ಜನರಿಗೆ ತಲುಪಿಸುವುದು ಕಾರ್ಯಕ್ರಮದ ಪ್ರಮುಖ ಗುರಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಯುವಕರಲ್ಲಿಯೇ ಹೃದಯಾಘಾತದ ಪ್ರಕರಣ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಅನಿಯಮಿತ ಆಹಾರ ಪದ್ಧತಿ, ಒತ್ತಡದ ಜೀವನ, ವ್ಯಾಯಾಮದ ಕೊರತೆ ಹಾಗೂ ಮಾಲಿನ್ಯದಂತಹ ಕಾರಣಗಳಿಂದ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿರುವುದರಿಂದ ಆರೋಗ್ಯಕರ ಜೀವನಶೈಲಿಯ ಮಹತ್ವವನ್ನು ತಿಳಿಸುವ ಪ್ರಯತ್ನವಾಗಿ ಮ್ಯಾರಥಾನ್ ಆಯೋಜಿಸಲಾಗಿದೆ ಎಂದು ಹೇಳಿದರು.

ಆರೋಗ್ಯದ ಜೊತೆಗೆ ಪರಿಸರ ಸಂರಕ್ಷಣೆಯ ಸಂದೇಶವನ್ನೂ ಕಾರ್ಯಕ್ರಮದ ಮೂಲಕ ಸಾರಲಾಗುತ್ತಿದೆ. ಹಸಿರು ಪರಿಸರ, ಸ್ವಚ್ಛ ನಗರ ಹಾಗೂ ಮಾಲಿನ್ಯ ನಿಯಂತ್ರಣದ ಅಗತ್ಯವನ್ನು ಜನರಿಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಆರೋಗ್ಯ ಕಾಪಾಡೋಣ ಪರಿಸರ ಉಳಿಸೋಣ ಎಂಬ ಘೋಷವಾಕ್ಯದೊಂದಿಗೆ ಮ್ಯಾರಥಾನ್ ನಡೆಯಲಿದೆ. ಫಿಟ್ ಹಾಸನ್, ಆರೋಗ್ಯಕರ ಹಾಸನ್, ತಂಬಾಕು ಮುಕ್ತ ಹಾಸನ್, ಸ್ವಚ್ಛ ಹಾಸನ್ ಹಾಗೂ ಹಸಿರು ಹಾಸನ್ ಎಂಬ ಪರಿಕಲ್ಪನೆಗಳನ್ನು ಜನಾಂದೋಲನವಾಗಿಸುವ ಗುರಿಯನ್ನು ಸಂಘ ಹೊಂದಿದೆ ಎಂದರು.

ಈಗಾಗಲೇ 500 ಜನ ಸ್ಪರ್ದಾಳುಗಳು ನೊಂದಾಯಿಸಿಕೊಂಡಿದ್ದು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ಸರ್ಕಾರಿ ಹಾಗೂ ಖಾಸಗಿ ನೌಕರರು, ಕ್ರೀಡಾಪಟುಗಳು, ಆರೋಗ್ಯಾಸಕ್ತರು ಸೇರಿದಂತೆ ಜಿಲ್ಲೆಯ ಎಲ್ಲ ವರ್ಗದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು. ಆಸಕ್ತರು ಮುಂಗಡವಾಗಿ ನೋಂದಾಯಿಸಿಕೊಂಡು ಮ್ಯಾರಥಾನ್‌ನಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ 80733 85213, 95917 03336 ಹಾಗೂ 99008 85186 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಕುವೆಂಪು ಯುವಕರ ಸಂಘ ತಿಳಿಸಿದೆ. ಪತ್ರಿಕಾಗೋಷ್ಠಿಯಲ್ಲಿ ಕುವೆಂಪು ಯುವಕರ ಸಂಘದ ಗೌರವಾಧ್ಯಕ್ಷ ಡಾ. ಸಿ.ಎನ್. ಜಗದೀಶ್, ಜಿ.ಸಿ. ಧರ್ಮರಾಜ್, ರಾಜೇಶ್, ಕಂಚಮಾರನಹಳ್ಳಿ ಕಾಂತರಾಜು, ದಯಾನಿಧಿ ಮೊದಲಾದವರಿದ್ದರು.

> ಡ್ರಗ್ಸ್ ಮುಕ್ತ, ಆರೋಗ್ಯಕರ, ತುಂಬಾಕು ಮುಕ್ತ, ಸ್ವಚ್ಛ ಹಾಸನ ಉದ್ದೇಶದ ಮ್ಯಾರಥಾನ್‌ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ ಸಂಪೂರ್ಣ ಸಹಕಾರ ನೀಡಿವೆ. ಮಕ್ಕಳಿಗೆ ಫನ್‌ರನ್ ಏರ್ಪಡಿಸಲಾಗಿದೆ. ಪುರುಷರಿಗೆ 5 ಕಿಮೀ, ಮಹಿಳೆಯರಿಗೆ 3 ಕಿಮೀ ಓಟ ಇದ್ದು, ವಿಜೇತರಿಗೆ ಕ್ರಮವಾಗಿ ಪ್ರಥಮ 5 ಸಾವಿರ, ದ್ವಿತೀಯ 3 ಸಾವಿರ ಮತ್ತು 3ನೇ ಬಹುಮಾನಕ್ಕೆ 2 ಸಾವಿರ ಇದೆ. ಸುಮಾರು 1 ಸಾವಿರ ಮಂದಿ ಭಾಗಿಯಾಗುವ ನಿರೀಕ್ಷೆ ಇದೆ ಎಂದು ಗಿರೀಶ್ ಕುಮಾರ್ ತಿಳಿಸಿದರು.

# ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಹಾರನಹಳ್ಳಿ ರಾಮಸ್ವಾಮಿ ಪದವಿ ಪೂರ್ವ ಕಾಲೇಜಿನಲ್ಲಿ ಹೊಸ ಹೆಜ್ಜೆ ಕಾರ್ಯಕ್ರಮದ ಅಡಿಯಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಎಂಟಿಇಎಸ್ ಅಧ್ಯಕ್ಷ ಬಿ.ಆರ್.ಗುರುದೇವ್, ಮಕ್ಕಳಿತ ಹಿತವಚನ ನೀಡಿದರು. ಈ ಸಂಸ್ಥೆಯಿಂದ ರಾಜ್ಯಮಟ್ಟದಲ್ಲಿ ಅಲ್ಲದೆ, ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಹೆಸರು ಮಾಡಿದ ವಿದ್ಯಾರ್ಥಿಗಳಖನ್ನು ನೆನೆಸಿಕೊಂಡು, ನೀವು ಸಹ ಸಂಸ್ಥೆಯಲ್ಲಿ ಕರಿತು ಹೆಸರು ಮಾಡಬೇಕು ಎಂದು ಆಶೀರ್ವದಿಸಿದರು.

ಅಲ್ಲದೆ ಇನ್ನೋರ್ವ ಅತಿಥಿ, ಎಂಟಿಎಸ್ ಕಾರ್ಯದರ್ಶಿ ಜಿ.ಟಿ.ಕುಮಾರ್ ಮಾತನಾಡಿ, ಇಂದಿನ ವಿದ್ಯಾರ್ಥಿಗಳೇ ನಾಳಿನ ನಾಯಕರು ಎಂಬ ಮಾತುಗಳನ್ನಾಡಿ ಶಿಕ್ಷಣ ಜೀವನವನ್ನು ಬದಲಾಯಿಸುವ ಅತ್ಯಂತ ಶಕ್ತಿಯುತ ಸಾಧನ ಎಂದು ಮಕ್ಕಳಿಗೆ ಅರಿವು ಮೂಡಿಸಿದರು.

ಹಾಗೆಯೇ ಹೆಚ್‌ಆರ್‌ಡಿಹೆಚ್‌ಇ ಕಾಲೇಜಿನ ನಿರ್ದೇಶಕ ಪಾರ್ಥ ಅವರು ಮಾತನಾಡಿ ಕಾಲೇಜಿನಲ್ಲಿರುವ ಕೋರ್ಸ್‌ಗಳ ಮಾಹಿತಿ ನೀಡಿದರು. ಅಲ್ಲದೆ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ನಿರ್ದೇಶಕ ಪ್ರಭಾಕರ್ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಪಿಯುಸಿ ವಿಭಾಗದ ಪ್ರಾಂಶುಪಾಲ ಪುನೀತಾ ಹೆನ್ರಿ ಅತಿಥಿಗಳನ್ನು ಸ್ವಾಗತಿಸಿದರು. ಎಲ್ಲ ಉಪನ್ಯಾಸಕರು, ವಿದ್ಯಾರ್ಥಿಗಳು ಇದ್ದರು.

# ಪುನೀತ್ ಕೆರೆಹಳ್ಳಿ ಖಾಕಿ ವಶಕ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮುಸ್ಲಿಂ ಧರ್ಮಗುರುಗಳಿಗೆ ಅವಮಾನ ಆರೋಪ ಮಾಡಿದ ಆರೋಪ ಹಿನ್ನೆಲೆಯಲ್ಲಿ ಹಿಂದೂಪರ ಹೋರಾಟಗಾರ ಪುನೀತ್ ಕೆರೆಹಳ್ಳಿ ಅವರನ್ನು ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ಪೊಲೀಸರು ಬಂಧಿಸಿದ್ದಾರೆ.

ಪುನೀತ್ ಕೆರೆಹಳ್ಳಿ ಅವರು



ಕೆಲ ದಿನಗಳ ಹಿಂದೆ ಮುಸ್ಲಿಂ ಧರ್ಮಗುರುಗಳಿಗೆ ಅವಮಾನ ಮಾಡಿದ್ದಾರೆ ಎಂದು ಅಬ್ದುಲ್ ರಜಾಕ್ ಎಂಬುವರು ದೂರು ಸಲ್ಲಿಸಿದ್ದರು. ಈ ದೂರಿನ ಆಧಾರದ ಮೇಲೆ, ತನಿಖೆ ಕೈಗೊಂಡ ಪೊಲೀಸರು, ಪುನೀತ್, ಆಲೂರು ತಾಲೂಕಿನ ಕೆರೆಹಳ್ಳಿ ಗ್ರಾಮದ ಅವರ ನಿವಾಸದಲ್ಲಿ ಇದ್ದಾರೆ ಎಂಬ ಮಾಹಿತಿ ತಿಳಿದು ದಾಳಿ ನಡೆಸಿದ ಪೊಲೀಸರು ಪುನೀತ್‌ನನ್ನು ಬಂಧಿಸಿ ಕರೆದೊಯ್ದಿದ್ದಾರೆ.

# ಜಾಮೀನು ಕನಸು ಭಗ್ನ

## ದರ್ಶನ್ ಅರ್ಜಿ ವಿಚಾರಣೆಗೆ ಅರ್ಹವಲ್ಲ ಎಂದ ಸುಪ್ರೀಂಕೋರ್ಟ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನವದೆಹಲಿ: ನಟ ದರ್ಶನ್,ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿ ವರ್ಷಕ್ಕೂ ಹೆಚ್ಚು ಸಮಯವಾಯ್ತು. ಪರಪ್ಪನ ಅಗ್ರಹಾರ ಜೈಲಿನಲ್ಲಿ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ದರ್ಶನ್‌ಗೆ ಈ ಹಿಂದೆ ಅನಾರೋಗ್ಯ, ವೈದ್ಯಕೀಯ ಚಿಕಿತ್ಸೆ ಹಿನ್ನಲೆ ಜಾಮೀನು ದೊರಕಿತ್ತು.

ಕೆಲ ತಿಂಗಳ ಕಾಲ ಜೈಲಿನಿಂದ ಹೊರಗಿದ್ದರು, ಆದರೆ ಸುಪ್ರೀಂಕೋರ್ಟ್, ಜಾಮೀನು ರದ್ದು ಮಾಡಿರುವುದು ಮಾತ್ರವೇ ಅಲ್ಲದೆ, ಇನ್ನೊಂದು ವರ್ಷ ಜಾಮೀನಿಗೆ ಅರ್ಜಿ ಸಲ್ಲಿಸದ ಹಾಗೆ ತಡೆದಿದೆ.

ಆದರೆ ದರ್ಶನ್ ಅವರು ಜಾಮೀನು ಪಡೆಯಲು ಪ್ರಯತ್ನಗಳನ್ನು ನಿಲ್ಲಿಸಿಲ್ಲ, ಆದರೆ ಪ್ರತಿಬಾರಿ ಅವರಿಗೆ ನಿರಾಸೆಯೇ ಎದುರಾಗುತ್ತಿದೆ. ಈ ಬಾರಿ ದರ್ಶನ್ ಜಾಮೀನು ಪಡೆಯುವ ಉದ್ದೇಶದಿಂದ ಪ್ರಾಥಮಿಕ ಅರ್ಜಿಯೊಂದನ್ನು ಸಲ್ಲಸಿದ್ದರು, ಆದರೆ ಆ ಅರ್ಜಿ ವಿಚಾರಣೆಗೆ ಅರ್ಹವಲ್ಲ ಎಂದು ತಿರಸ್ಕೃತಗೊಂಡಿದೆ.

ಕಳೆದ ಬಾರಿ ದರ್ಶನ್ ಅವರ ಜಾಮೀನು ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, ದರ್ಶನ್ ಪ್ರಕರಣದಲ್ಲಿ ಒಂದು ವರ್ಷದ ಒಳಗಾಗಿ ಸುಮಾರು 60 ಸಾಕ್ಷಿಗಳ ವಿಚಾರಣೆ ಮಾಡದಿದ್ದರೆ ಆಗ ದರ್ಶನ್ ಜಾಮೀನಿಗೆ ಅರ್ಜಿ ಸಲ್ಲಿಸಬಹುದು ಎಂದು ಸುಪ್ರೀಂಕೋರ್ಟ್, ಹೇಳಿತ್ತು.

ಆ ಮೂಲಕ ಮುಂದಿನ ಒಂದು ವರ್ಷದ ವರೆಗೆ ದರ್ಶನ್‌ಗೆ ಜಾಮೀನು ಸಲ್ಲಿಸಲು ಅವಕಾಶವನ್ನು ನಿರಾಕರಿಸಲಾಗಿತ್ತು.

# ಆರ್ಥಿಕವಾಗಿ ಹಿಂದುಳಿದ ಮಹಿಳೆಗೆ ಹೊಲಿಗೆ ಯಂತ್ರ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಸಹಕಾರ ಸಪ್ತಾಹ ಆಚರಣೆಯ ಅಂಗವಾಗಿ ಕೃಷಕ್ ಭಾರತಿ ಕೋ-ಆಪರೇಟಿವ್ ಲಿಮಿಟೆಡ್ (KRIBHCO) ಕರ್ನಾಟಕ ಘಟಕದ ವತಿಯಿಂದ, ತಾಲೂಕಿನ ಮೊಸಳೆಹೊಸಹಳ್ಳಿಯಲ್ಲಿ ಆದಾಯ ಉತ್ಪಾದನಾ ಕಾರ್ಯಕ್ರಮ, ಕೃಷಿ ಜಾಗೃತಿ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಆದಾಯ ಉತ್ಪಾದನಾ ಕಾರ್ಯಕ್ರಮದ ಭಾಗವಾಗಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ (PACS) ಮೂಲಕ ಗುರುತಿಸಲಾದ ಆರ್ಥಿಕವಾಗಿ ಹಿಂದುಳಿದ ಮಹಿಳೆಯೊಬ್ಬರಿಗೆ ಕ್ರಿಭ್ಕೋ ವತಿಯಿಂದ ಉಚಿತವಾಗಿ ಹೊಲಿಗೆ ಯಂತ್ರವನ್ನು ವಿತರಿಸಿ ನೆರವು ನೀಡಲಾಯಿತು. ಇದೇ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನೂರಾರು ರೈತರಿಗೆ ಮತ್ತು ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಲಾಯಿತು.



ಕ್ರಿಭ್ಕೋ ಪ್ರಾದೇಶಿಕ ಮಾರಾಟ ಅಧಿಕಾರಿ ಕಾರ್ತಿಕ್ ಕೆ.ಬಿ. ಅವರು ಮಾತನಾಡಿ, ಸಾವಯವ ಕೃಷಿ, ಸಿಟಿ ಕಂಪೋಸ್ಟ್, ಜೈವಿಕ ಗೊಬ್ಬರಗಳು ಹಾಗೂ ಜಿಂಕ್ ಸಲ್ಫೇಟ್ ಬಳಕೆಯ ಮಹತ್ವವನ್ನು ವಿವರಿಸಿದರು. ಸಂಸ್ಥೆಯ ಉತ್ಪನ್ನಗಳಾದ 'ಶಿವಾರಿಕಾ', 'ರೈಜೋಸೂಪರ್' ಮತ್ತು ದ್ರವ ಜೈವಿಕ ಗೊಬ್ಬರಗಳನ್ನು ಭತ್ತದ ಬೆಳೆಯಲ್ಲಿ ಬಳಸುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಿದರು. ಈ ಭಾಗದ ಪ್ರಮುಖ ಬೆಳೆಗಳಾದ ಮೆಕ್ಕೆಜೋಳ, ಶುಂಠಿ ಮತ್ತು ಆಲೂಗಡ್ಡೆಗೆ ಪೂರಕವಾದ ಪೋಷಕಾಂಶಗಳ ನಿರ್ವಹಣೆಯ ಬಗ್ಗೆ ತಿಳಿಸಿಕೊಟ್ಟ ಅವರು, ರೈತರ ಸಂಶಯಗಳಿಗೆ ಸೂಕ್ತ ಡೋಸೇಜ್ ಹಾಗೂ ಅನ್ವಯಿಸುವ ವಿಧಾನಗಳ ಮೂಲಕ ಪರಿಹಾರ ಒದಗಿಸಿದರು.

ಕಾರ್ಯಕ್ರಮದಲ್ಲಿ ಸಹಕಾರ ಯೂನಿಯನ್ ಹಾಸನದ ಕ್ಷೇತ್ರಾಧಿಕಾರಿ ಕೇಶವ್ ಟಿ. ಅವರು ನೆರೆದಿದ್ದವರಿಗೆ ಸಹಕಾರ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಮೊಸಳೆಹೊಸಹಳ್ಳಿ ಪ್ಯಾಕ್ಸ್ ಅಧ್ಯಕ್ಷ ಚಂದ್ರು, ಕ್ರಿಭ್ಕೋ ಆರ್.ಜಿ.ಬಿ ಸದಸ್ಯ ಸ್ವಾಮಿಗೌಡ, ಎಂ.ಎಂ.ಎಂ ಆಸ್ಪತ್ರೆಯ ಸಂಸ್ಥಾಪಕ ನಿರ್ದೇಶಕ ಡಾ. ಉಮೇಶ್, ಯಶಸ್ವಿನಿ ಸಂಯೋಜಕ ವಿಕ್ರಮ್, ಸಹಕಾರ ಯೂನಿಯನ್ ಅಧ್ಯಕ್ಷ ಎಸ್.ಎನ್. ಪ್ರಕಾಶ್, ವ್ಯವಸ್ಥಾಪಕಿ ಭಾರತಿ ಹಾಗೂ ಗ್ರಾಮದ ನೂರಕ್ಕೂ ಹೆಚ್ಚು ಪ್ರಗತಿಪರ ರೈತರು ಉಪಸ್ಥಿತರಿದ್ದರು.

> "ರೈತರು ಕೃಷಿಯಲ್ಲಿ ಅಧಿಕ ಇಳುವರಿ ಪಡೆಯಲು ಸಾವಯವ ಕೃಷಿ ಹಾಗೂ ಜೈವಿಕ ಗೊಬ್ಬರಗಳ ಬಳಕೆಯತ್ತ ಒಲವು ತೋರಬೇಕು. ನಮ್ಮ ಸಹಕಾರ ಸಂಘದಲ್ಲಿ ಕ್ರಿಭ್ಕೋ ಸಂಸ್ಥೆಯ ಗುಣಮಟ್ಟದ ಕೃಷಿ ಉತ್ಪನ್ನಗಳು ಲಭ್ಯವಿದ್ದು, ರೈತರು ಇದರ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕು."
>
> **- ವಿಜಯ್ ಕುಮಾರ್ ಸಿಇಒ, ಮೊಸಳೆಹೊಸಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (PACS).**

# ಹೆದ್ದಾರಿಯೆಂಬ ಹೆಬ್ಬಾವು- 1

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-9**

ಈ ಎಲ್ಲಾ ಸಹಜವಾದ ಅವಾಂತರಗಳ ನಂತರ ಸಕಲೇಶಪುರ ತಲುಪಿದಾಗ ರಾತ್ರಿ ಗಂಟೆ ಎಂಟು. ಎರಡು ಗಂಟೆ ದೀರ್ಘಕಾಲದ ಪ್ರಯಾಣದ ನಂತರ ಬಸ್‌ಸ್ಟ್ಯಾಂಡಿನ ಟಾಯ್ಲೆಟ್‌ಗೆ ಹೋದರೆ ಉಸಿರುಕಟ್ಟಿ ಸಾಯುವಂಥಾ ಅನುಭವ! ಕೆ.ಎಸ್.ಆರ್.ಟಿ.ಸಿ ಯವರೋ ಅಥವಾ ಪುರಸಭೆಯವರೋ ಯಾರದ್ದೋ ಜವಾಬ್ದಾರಿ. ಅವರಂತೂ ಎಚ್ಚರವಾಗಿರಲಿಲ್ಲವೆಂದೆನಿಸುತ್ತೆ. ಅವರು ಎಚ್ಚರವಾಗಿರಲಿಲ್ಲವಾದ್ದರಿಂದ ನಮ್ಮನ್ನು ಒಳಗೆ ಬಂದೊಡನೆ ಎಚ್ಚರ ತಪ್ಪಿಸುವ ಹುನ್ನಾರವಿದೆಂದು ಕಾಣಿಸುತ್ತೆ. ಇದು ಇದೊಂದು ಊರಿನ ಸಮಸ್ಯೆಯಲ್ಲ. ಸಾರ್ವಜನಿಕ ಆಸ್ತಿ, ವ್ಯವಸ್ಥೆಯೆಂದರೆ ಈ ರೀತಿಯ ಅಸಡ್ಡೆ, ಅನಾದರ ಸಹಜವೇನೋ ಎಂಬ ಸಂದೇಹ ಮೂಡುತ್ತದೆ. ಯಾರೋ ಒಬ್ಬ ಒಳಗೆ ಸೇರಿಕೊಂಡಿದ್ದಾನೆ. ಟಾಯ್ಲೆಟ್ ಮೇಲ್ವಿಚಾರಕ 'ಅಣ್ಣ ಸ್ವಲ್ಪ ಯಚ್ರ ಆಗಣ್ಣಾ, ಒಂದ್ ಗಂಟೆಯಾಯ್ತಲ್ಲ ಒಳಗೋಗಿ' ಎಂದು ಬಾಗಿಲು ತಟ್ಟಾ ಇದ್ದ. ನನಗನ್ನಿಸಿತು ಈ ವಾಸನೆಗೆ ಒಳಗೇ ಪರಂಧಾಮಗೈದಿರಬಹುದೆಂದು. ಹೊರಗೆ ನಿಂತು ಒಳಗೆ ಹೋಗಲು ಕಾಯುತ್ತಿದ್ದವನೊಬ್ಬ ''ಅವರಿಗಲ್ಲಿ ನೆಮ್ಮದಿ, ನಮಗಿಲ್ಲಿ ಪ್ರಾಣಸಂಕಟ'' ಎಂದು ಸ್ಫೋಟಕ್ಕೆ ಸಿದ್ದವಾಗುತ್ತಿರುವುದನ್ನು ತಡೆಯಲು ನುಲಿಯುತ್ತಾ ಕಣ್ಣುಗಳನ್ನು ಮೇಲಕ್ಕೆ ಸಿಕ್ಕಿಸಿಕೊಂಡು ಯಮಯಾತನೆ ಪಡುತ್ತಿದ್ದಾನೆ.

ಹಲವು ಶೌಚಾಲಯಗಳನ್ನು ಉದ್ಘಾಟಿಸಿದ ನಂತರ ಬಳಸಿದರೆ ಸ್ವಚ್ಛ ಮಾಡಲೇಬೇಕಾಗುತ್ತದೆ ಎಂದು ಬೀಗ ಹಾಕಿಡುವ ಅತಿ ಬುದ್ಧಿವಂತಿಕೆಯ ಕೆಲಸವನ್ನು ಮಾಡುತ್ತಾರೆ. ಭಾರೀ ಉತ್ಸಾಹದಲ್ಲಿ ಶೌಚಾಲಯ ನಿರ್ಮಾಣ ಮಾಡುತ್ತಾರೆ. ನಿರ್ಮಾಣದ ಗುತ್ತಿಗೆ ಪಡೆಯಲು ಭಾರೀ ಪೈಪೋಟಿಯ ನಂತರ ವಿದ್ಯುತ್, ನೀರು, ಯೂಜೀಡಿ ಸಂಪರ್ಕ ಕಲ್ಪಿಸದೇ ಅಭೂತಪೂರ್ವ ಲೋಕಾರ್ಪಣೆ ಕಾರ್ಯಕ್ರಮಮೂ ನಡೆಯುತ್ತದೆ. ಇಂಜಿನೀಯರ್, ಅಧಿಕಾರಿ, ಪ್ರಜಾಪ್ರತಿನಿಧಿಗೆ ಸಲ್ಲಬೇಕಾದ್ದು ಸಲ್ಲಿಸಿದ ನಂತರ ಗುತ್ತಿಗೆದಾರನಿಗೆ ಬಿಲ್ ಹಣ ಪಾವತಿಯೂ ಆಗುತ್ತದೆ. ಅಲ್ಲಿಗೆ ಮುಗಿಯಿತು ಮುಖ್ಯದ್ವಾರಕ್ಕೆ ಬೀಗ ಹಾಕಲಾಗುತ್ತೆ. ಜನ ಆ ಕಟ್ಟಡದ ಪಕ್ಕದ ಅಥವಾ ಹಿಂಭಾಗದ ಗೋಡೆಗೆ ಪನ್ನೀರಿಡಲಾರಂಭಿಸುತ್ತಾರೆ. ಕಟ್ಟಡದ ಸುತ್ತಲೂ ಮುಳ್ಳುಕಂಟಿಗಳ ಪೊದೆ, ಸುತ್ತಲೂ ಜನರಾರೂ ಸುಳಿದಾಡದಂತಾ ಸನ್ನಿವೇಶ ನಿರ್ಮಾಣವಾಗುತ್ತದೆ. ಕಟ್ಟಡದ ಮೇಲೆ ಸಾರ್ವಜನಿಕ ಶೌಚಾಲಯ ಬೋರ್ಡ್, ಮುಂದಿನ ಗೋಡೆಯಲ್ಲಿ ನಿರ್ಮಾಣ ಪ್ರಾರಂಭೋತ್ಸವದ ಅಮೃತಶಿಲೆ!!!!

ಯಾಕೋ ಇದ್ದಕ್ಕಿದ್ದಂತೆ ಒಂದು ವಿಶಿಷ್ಠ ಘಟನೆ ನೆನಪಿಗೆ ಬಂತು. ಎಂಬತ್ತರ ದಶಕದಲ್ಲಿ ರೈತ ಚಳುವಳಿ ಉತ್ತುಂಗದಲ್ಲಿದ್ದ ದಿನಗಳವು. ಸರ್ಕಾರದ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಲು ನಾಡಿನ ಮೂಲೆಮೂಲೆಯಿಂದ ಸಾವಿರಾರು ಮಂದಿ ರಾಜಧಾನಿಯಲ್ಲಿ ಜಮಾಯಿಸಿದ್ದರು. ರೈತರ ಹಸಿವನ್ನು ತಣಿಸಲೇನೋ ಒಂದಷ್ಟು ಅನ್ನ, ಮುದ್ದೆ ಬೇಯಿಸಲು ವ್ಯವಸ್ಥೆಯಾಗಿತ್ತು. ಆದರೆ, ಹಸಿವನ್ನು ನೀಗಿಸಿಕೊಂಡ ನಂತರ ವಿಸರ್ಜನೆಗೆ ಸೂಕ್ತ ಅನುಕೂಲಗಳಿರಲಿಲ್ಲ. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜೇನುಗೂಡಿನಂತೆ ಸೇರಿದ್ದ ಆ ರೈತಸ್ತೋಮದ ಶೌಚಕ್ಕೆ ವ್ಯವಸ್ಥೆ ಮಾಡುವುದು ಸಾಧ್ಯವೂ ಇರಲಿಲ್ಲ ಬಿಡಿ. ಮೊದಲೇ ಆಡಳಿತ, ಸರ್ಕಾರ, ರಾಜಕಾರಣಿಗಳು ಮತ್ತು ಅಧಿಕಾರಶಾಹಿಯ ಮೇಲಿನ ಕೊನೆಮೊದಲಿಲ್ಲದ ಅಸಹನೆಯಿಂದ ಕುದಿಯುತ್ತಿದ್ದ ಅನ್ನದಾತರು ಒಕ್ಕೊರಲಿನಿಂದ ಘೋಷಿಸಿದ್ದೇ ಕಕ್ಕಸ್ ಚಳುವಳಿ. ಭದ್ರತಾ ಸಿಬ್ಬಂಧಿಯ ಪ್ರತಿರೋಧವನ್ನೂ ಲೆಕ್ಕಿಸದೇ ವಿಧಾನಸೌಧದಾವರಣದ ಮೂಲೆಮೂಲೆಯಲ್ಲಿ, ಸುತ್ತಮುತ್ತಲಿನ ಉದ್ಯಾನಗಳಲ್ಲಿ, ಆಡಳಿತ ಪಡಸಾಲೆಯ ಕಂಬಕಂಬಗಳ ಮರೆಯಲ್ಲಿ ಅಸಹನೆಯ ಇಂಧನ ಚೆಲ್ಲಿ, ಸೇಡಿನ ಬೆಂಕಿಯನ್ನು ಹಚ್ಚಿದ ರೈತರು ವಾರದ ನಂತರ ತಮ್ಮೂರಿಗೆ ಹಿಂದಿರುಗಿದರೂ ಆ ಬೆಂಕಿ ಆರಲು ಒಂದು ತಿಂಗಳೇ ಹಿಡಿದಿತ್ತು. ಹಲವಾರು ವರ್ಷಗಳಿಂದ ರಜೆಯನ್ನೇ ಹಾಕದಿದ್ದ ನೌಕರಶಾಹಿ ಧೀರ್ಘ ರಜೆಗೆ ಶರಣಾಗಿದ್ದೂ ಇತಿಹಾಸ.

ಎನ್.ವೈ.ಎ.ಸಿ. ನವರು ರಾತ್ರಿಯ ಟ್ರೇನ್‌ನಲ್ಲಿ ಬೆಂಗಳೂರಿನಿಂದ ಸಕಲೇಶಪುರಕ್ಕೆ ಬೆಳಗಿನ ಜಾವ ನಾಲ್ಕಕ್ಕೆ ಬರುವರೆಂದು ತಿಳಿದುಕೊಂಡಿದ್ದೆ. ಅಲ್ಲಿ ಅವರನ್ನು ಕೂಡಿಕೊಂಡು ಮರುದಿನದ ಚಾರಣಕ್ಕೆ ಮುಂದುವರೆಯುವದೆಂದು ಯೋಜಿಸಿದ್ದೆ. ಸಕಲೇಶಪುರದ ಬಸ್‌ಸ್ಟ್ಯಾಂಡಿನ ಹಿಂಭಾಗದ ವಸತಿ ಗೃಹಮೊಂದರಲ್ಲಿ ವಾಸ್ತವ್ಯ ಹೂಡಿದ್ದ ನಾನು ರಾತ್ರಿ



ಊಟಕ್ಕೆ ಹೋದಾಗ ಹೋಟೆಲಿನ ಹುಡುಗರನ್ನು ರೈಲ್ವೆಟ್ರ್ಯಾಕ್ ಬಗ್ಗೆ ವಿಚಾರಿಸಿದೆ. ಅವನು ನನ್ನನೊಮ್ಮೆ ಮೇಲಿಂದ ಕೆಳಗೆ ನೋಡಿ, ''ಈಗ ಯಾಕೆ ಹೋಗ್ತಿರಿ ಸಾರ್, ಅಲ್ಲಿ ಟ್ರ್ಯಾಕ್ ಇತ್ತು ಅನ್ನೋದೆ ಮರೆತು ಹೋದಂತಾಗಿದೆ. ವಿಪರೀತ ಕಾಡು ಬೆಳೆದಿದೆ. ನಿಮಗೆ ಹೋಗಲೇಬೇಕೆಂದಿದ್ದರೆ ನಾನೊಂದು ಐಡಿಯಾ ಕೊಡ್ತೇನಿ ಹಾಗೇ ಮಾಡಿ. ಇಲ್ಲಿಂದ ಹನ್ನೆರಡು ಕಿಲೋಮೀಟರ್ ದೂರದಲ್ಲಿ ಮಾರನಹಳ್ಳಿ ಎಂಬ ಸ್ಟಾಪ್ ಇದೆ. ನಾನೂ ಅದೇ ಊರಿನವ. ಅಲ್ಲಿಳಿದು ನಡೆದರೆ ಒಂದು ಕಿಲೋಮೀಟರ್‌ಗೆ ರೈಲ್ವೆ ಕಂಬಿ ಸಿಗುತ್ತೆ'' ಎಂದ.

ಸರಿ, ಊಟ ಮುಗಿಸಿಕೊಂಡು ಲಾಜ್‌ಗೆ ಹೋದ ನಾನು, ರೂಂ ಬಾಯ್‌ಗಳನ್ನು ವಿಚಾರಿಸಿಕೊಂಡು ಅವರ ಸಲಹೆಯಂತೆ ನನ್ನ ಪ್ರಯಾಣದ ಪ್ಲಾನನ್ನು ಬದಲಾಯಿಸಿಕೊಂಡೆ. ಬೆಳಿಗ್ಗೆ ಬೇಗನೆದ್ದು ಯಾವುದಾದರೂ ವೆಹಿಕಲ್‌ನಲ್ಲಿ ಮಾರನಹಳ್ಳಿಯವರೆಗೆ ಡ್ರಾಪ್ ತೆಗೆದುಕೊಂಡು ಎನ್.ವೈ.ಎ.ಸಿಯವರನ್ನು ಕಾಡಿನ ನಡುವೆ ಎದುರಾಗಿ ಸರ್ಪ್ರೈಸ್ ಮಾಡುವುದೆಂದು ಅಂದುಕೊಳ್ಳುತ್ತಾ ವಾಪಾಸ್ ಬರುವಾಗ ಸ್ವಲ್ಪ ಹಣ್ಣು, ಬ್ರೆಡ್, ಚಿಪ್ಸ್ ಮುಂತಾದುವನ್ನು ತೆಗೆದುಕೊಂಡು ಬೇಗ ಮಲಗಿ ಬೆಳಿಗ್ಗೆ ಆದಷ್ಟು ಬೇಗ ಏಳಬೇಕೆಂದುಕೊಂಡು ವಸತಿಗೃಹಕ್ಕೆ ಬಂದವನೇ ಇನ್ನೊಮ್ಮೆ ಅಲ್ಲಿಯ ಮೇನೇಜರ್‌ನನ್ನು ಕಂಡು ರೈಲ್ವೇ ದಾರಿಯ ಬಗ್ಗೆ ತಿಳಿದುಕೊಂಡೆ. ಏನಾದರಾಗಲೀ ಇದೂ ಒಂದು ಪ್ರಯೋಗ ನಡೆಯಲೆಂದು ನಿರ್ಧರಿಸಿದೆ. ನಾನಲ್ಲಿಯವರೆಗೂ ಎನ್.ವೈ.ಎ.ಸಿಯವರನ್ನು ಭೇಟಿಯಾದದ್ದಿರಲಿ, ನೋಡಿಯೂ ಇರಲಿಲ್ಲ. ಇದಕ್ಕಿಂತ ಮುಖ್ಯವಾಗಿ ಸಕಲೇಶಪುರದಿಂದ ಮಂಗಳೂರಿನ ರಸ್ತೆಯಲ್ಲಿ ಬಸ್‌ನಲ್ಲಿ ಹಗಲಿನಲ್ಲಿ ಬಿಟ್ಟರೆ ಎಂದೂ ಒಂಟಿಯಾಗಿ ಪ್ರಯಾಣಿಸಿಯೂ ಇರಲಿಲ್ಲ. ಹೇಗೋ ಆಗುತ್ತೆ ಎಂದುಕೊಂಡು ಬೆಳ್ಳಂಬೆಳಿಗ್ಗೆಯೇ ಸ್ಪೆಷಲ್ ಅಪೀಯರೆನ್ಸ್ ಕೊಡೋಣವೆಂದು ನಿದ್ರೆಗಾಗಿ ಹಾಸಿಗೆಯಲ್ಲಿ ಉರುಳಿದೆ. ಬೆಳಿಗ್ಗೆ ಮೂರೂವರೆಗೆ ಎದ್ದು ನಾಲ್ಕೂವರೆಗೆ ಮಾರನಹಳ್ಳಿ ತಲುಪಿ, ಐದೂವರೆಗೆ ಬರುವ ಎನ್.ವೈ.ಎ.ಸಿ. ಯವರನ್ನು ರೈಲ್ವೆ ಹಳಿಗಳ ಮೇಲೆ ಭೇಟಿಮಾಡುವುದೆಂದು ನಿರ್ಧರಿಸಿದೆ. ಬೆಳಿಗ್ಗೆ ಯಾವುದಾದ್ರೂ ಮುಖ್ಯವಾದ ಕೆಲಸ ಅಥವಾ ವಿಶೇಷ ಸ್ಥಳಗಳಿಗೆ ಭೇಟಿ ನೀಡುವ ಕಾರ್ಯಕ್ರಮವಿದ್ದರೆ ರಾತ್ರಿ ಎಷ್ಟರ ಮಟ್ಟಿಗೆ ನಿದ್ರೆ ಬರುವುದೆಂದು ನಿಮಗೇ ಗೊತ್ತು.

ಎಷ್ಟೊತ್ತಿಗೆ ಬೆಳಗಾಗುತ್ತೆ, ಹೋಟೆಲಿನವನು, ಲಾಜ್‌ನವನು ನೀಡಿದ ಮಾಹಿತಿ ಎಷ್ಟರಮಟ್ಟಿಗೆ ಸರಿ ಎಂದುಕೊಳ್ಳುತ್ತಾ ಎದೆಯೊಳಗೆ ರೈಲು ಓಡಿಸಿಕೊಳ್ಳುತ್ತಿದ್ದೆ.

ಈ ಕುತೂಹಲ, ಉತ್ಸಾಹ, ಆತಂಕಗಳು ಮನುಷ್ಯನನ್ನು ಕುಂತಲ್ಲಿ ಕೂರಿಸದೇ ಸದಾ ಎಚ್ಚರ ಜಾಗೃತಿಯಲ್ಲಿಡುತ್ತವೆ. ನಾಳೆ ಬೆಳಿಗ್ಗೆ ಸ್ವಲ್ಪ ದೂರ ಒಬ್ಬಂಟಿಯಾಗಿ ಅಪರಿಚಿತ ಜಾಗದಲ್ಲಿ ನಡೆಯಬೇಕಾಗುತ್ತದೆಯೆಂಬ ಕಲ್ಪನೆಯೇ ನನ್ನನ್ನು ಪುಳಕಗೊಳಿಸಿತ್ತು. ರಾತ್ರಿಯಿಡೀ ಬೆಳಗಿನ ನಿರೀಕ್ಷೆಯಲ್ಲೇ ನಿದ್ದೆ ಬರಲಿಲ್ಲ. ಎಷ್ಟೊತ್ತಿಗೆ ಏಳ್ತೀನಿ, ತಡವಾದರೆ ನಮ್ಮ ತಂಡದವರು ನನಗಿಂತ ಮುಂಚೆಯೇ ಪಾಸ್ ಆಗಿ ಹೋದರೆ ನಾನು ತ್ರಿಶಂಕು ಸ್ಥಿತಿಗೆ ಸಿಕ್ಕಿಹಾಕಿಕೊಳ್ತೇನೆ. ಹೇಗಾದರೂ ಅವರಿಂದ ತಪ್ಪಿಸಿಕೊಳ್ಳದಂತೆ, ಮುಂಚೆಯೇ ಕೀ ಪಾಯಿಂಟ್ ತಲುಪಬೇಕೆಂದು ಹೊರಳಿ ಹೊರಳಿ ಕಡೆಗೂ ಎದ್ದೆ. ಇದು ನಿದ್ದೆ ಬರುವ ಲಕ್ಷಣವಲ್ಲ ಎಂದೆನಿಸಿ ಎದ್ದವನು ಸ್ನಾನ ಮುಗಿಸಿದೆ. ಆತಂಕದಿಂದ ಹಸಿವಾಗಿ ಸ್ವಲ್ಪ ಹಣ್ಣು, ಬ್ರೆಡ್ಡನ್ನು ತಿಂದು ನೀರು ಕುಡಿದೆ.

# ಇತಿಹಾಸದಲ್ಲಿ ಈ ದಿನ

## ಜುಲೈ-04

1776: ಅಮೆರಿಕದ ಕಾಂಗ್ರೆಸ್ ಸ್ವಾತಂತ್ರ್ಯ ಘೋಷಣೆ ಮತ್ತು ಗ್ರೇಟ್ ಬ್ರಿಟನ್‌ನಿಂದ ಸ್ವಾತಂತ್ರ್ಯ ಘೋಷಿಸಿತು.

1785 ರಲ್ಲಿ, ಭೂವಿಜ್ಞಾನಿ ಜೇಮ್ಸ್ ಹಟ್ಟನ್ ಅವರು ಎಡಿನ್‌ಬರ್ಗ್‌ನ ರಾಯಲ್ ಸೊಸೈಟಿಯ ಸಭೆಯಲ್ಲಿ ಮೊದಲ ಬಾರಿಗೆ ತಮ್ಮ ಏಕರೂಪತಾವಾದದ ಸಿದ್ಧಾಂತದ ಸಾರಾಂಶವನ್ನು ಸಾರ್ವಜನಿಕವಾಗಿ ಓದಿದರು.

1803: ಅಧ್ಯಕ್ಷ ಥಾಮಸ್ ಜೆಫರ್ಸನ್ ಲೂಸಿಯಾನ ಖರೀದಿಯನ್ನು ಅಮೆರಿಕಾದ ಜನರಿಗೆ ಘೋಷಿಸಿದರು.

1838 ರ ಹಸ್ಕರ್ ಪಿಟ್ ದುರಂತ: ಇಂಗ್ಲೆಂಡ್‌ನ ಸಿಲ್ಕ್‌ಸ್ಟೋನ್ ಕೊಲಿಯರಿಯಲ್ಲಿ ಪ್ರವಾಹದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ 26 ಮಕ್ಕಳು ಮುಳುಗಿ ಸಾವನ್ನಪ್ಪಿದರು. ಇದು 1842 ರ ಗಣಿ ಕಾಯ್ದೆಗೆ ಕಾರಣವಾಯಿತು, ಇದು ಮಹಿಳೆಯರು ಮತ್ತು ಮಕ್ಕಳು ನೆಲದಡಿಯಲ್ಲಿ ಕೆಲಸ ಮಾಡುವುದನ್ನು ನಿಷೇಧಿಸುತ್ತದೆ.

1934: ಪರಮಾಣು ಬಾಂಬ್‌ನ ಸರಪಳಿ-ಪ್ರತಿಕ್ರಿಯೆ ವಿನ್ಯಾಸಕ್ಕೆ ಹಂಗೇರಿಯನ್ ಭೌತಶಾಸ್ತ್ರಜ್ಞ ಲಿಯೋ ಸ್ಜಿಲಾರ್ಡ್ ಪೇಟೆಂಟ್ ಪಡೆದರು.

2017: ಉತ್ತರ ಕೊರಿಯಾ ತನ್ನ ಮೊದಲ ಯಶಸ್ವಿ ಖಂಡಾಂತರ ಕ್ಷಿಪಣಿಯನ್ನು ಜಪಾನ್ ಸಮುದ್ರಕ್ಕೆ ಪರೀಕ್ಷಿಸಿತು.

2025 ರಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ 'ಒಂದು ದೊಡ್ಡ ಸುಂದರ ಮಸೂದೆ'ಗೆ ಕಾನೂನಾಗಿ ಸಹಿ ಹಾಕಿದರು, ಇದನ್ನು ಸೆನೆಟ್ 51-50 ಮತಗಳಿಂದ ಮತ್ತು ಪ್ರತಿನಿಧಿಗಳ ಸಭೆ 218-214 ಮತಗಳಿಂದ ಅಂಗೀಕರಿಸಿತು; ಐದು ರಿಪಬ್ಲಿಕನ್ನರು ಎಲ್ಲಾ ಡೆಮೋಕ್ರಾಟ್‌ಗಳನ್ನು ವಿರೋಧವಾಗಿ ಸೇರಿಕೊಂಡರು

1970: ಕ್ಯಾಸಿ ಕಾಸೆಮ್ ಅವರ ಕೌಂಟ್‌ಡೌನ್ ರೇಡಿಯೋ ಕಾರ್ಯಕ್ರಮ "ಅಮೇರಿಕನ್ ಟಾಪ್ 40" ಲಾಸ್ ಏಂಜಲೀಸ್ ರೇಡಿಯೊದಲ್ಲಿ ಪ್ರಥಮ ಪ್ರದರ್ಶನಗೊಂಡಿತು.

1831 ರಲ್ಲಿ, ಸ್ಯಾಮ್ಯುಯೆಲ್ ಫ್ರಾನ್ಸಿಸ್ ಸ್ಮಿತ್ ಅವರ ಸಾಹಿತ್ಯದೊಂದಿಗೆ "ಅಮೇರಿಕಾ (ನನ್ನ ದೇಶ 'ಟಿಸ್ ಆಫ್ ದೀ)" ತನ್ನ ಮೊದಲ ಸಾರ್ವಜನಿಕ ಪ್ರದರ್ಶನವನ್ನು ಮ್ಯಾಸಚೂಸೆಟ್ಸ್‌ನ ಬೋಸ್ಟನ್‌ನಲ್ಲಿರುವ ಪಾರ್ಕ್ ಸ್ಟ್ರೀಟ್ ಚರ್ಚ್‌ನಲ್ಲಿ ನಡೆಸಿತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248